# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

[ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ]

ದೂರವಾಣಿ: 0821-2340292
**Email:** aeecescrkn@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ,
ಮೈಸೂರು.

ಸಂಖ್ಯೆ:-ಸಕಾನಿಇಂ/ಸ.ಇಂ/ಆರ್‌ಕೆನ/ಉವಿ/ಎಫ್ /2018-19/ 213-14    ದಿನಾಂಕ:- 22-5-18

## ಸಭಾ ನಡಾವಳಿ

ರಾಮಕೃಷ್ಣ ನಗರ ಉಪ ವಿಭಾಗದಲ್ಲಿ, ಶ್ರೀಯುತ ಮುನಿಗೋಪಾಲ್ ರಾಜು, ಅಧೀಕ್ಷಕ ಇಂಜಿನೀಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾವಿಸನಿನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 19.05.2018 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯಲ್ಲಿ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದು ಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

**ಹಾಜರಿದ್ದ ಅಧಿಕಾರಿ/ನೌಕರರು:-**

1. ಶ್ರೀಯುತ ಮುನಿಗೋಪಾಲ್ ರಾಜು, ಅಧೀಕ್ಷಕ ಇಂಜಿನೀಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾವಿಸನಿನಿ, ಮೈಸೂರು
2. ಶ್ರೀಯುತ ರಾಮಚಂದ್ರ, ಕಾರ್ಯನಿರ್ವಾಹಕ ಇಂಜಿನೀಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು.
3. ಶ್ರೀಯುತ ಸುರೇಂದ್ರ ಆರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರಾಮಕೃಷ್ಣನಗರ ಉಪ ವಿಭಾಗ.
4. ಶ್ರೀಮತಿ ದಿವ್ಯ.ಸಿ.ಎನ್, ಸಹಾಯಕ ಇಂಜಿನಿಯರ್(ವಿ),ರಾಮಕೃಷ್ಣನಗರ ಉಪ ವಿಭಾಗ.
5. ಶ್ರೀಯುತ ಮುಹೀದ್ ಅಹಮದ್, ಸಹಾಯಕ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
6. ಶ್ರೀಮತಿ ಗೀತಾ ಬಿ.ಸಿ, ಹಿರಿಯ ಸಹಾಯಕಿ, ವಿವೇಕಾನಂದ ಶಾಖೆ.
7. ಶ್ರೀಯುತ ಗುರುಸ್ವಾಮಿ, ಕಿರಿಯ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
8. ಶ್ರೀಯುತ ತಿಮ್ಮರಾಜು, ಕಿರಿಯ ಇಂಜಿನಿಯರ್(ವಿ), ಹಾರೋಹಳ್ಳಿ ಶಾಖೆ.
9. ಶ್ರೀಯುತ ವೆಂಕಟೇಶ್, ಕಿರಿಯ ಇಂಜಿನಿಯರ್(ವಿ), ಜಯಪುರ ಶಾಖೆ.

**ಹಾಜರಿದ್ದ ಗ್ರಾಹಕರು:-**

1. ಶ್ರೀ ಬಸವರಾಜು, ಗುಜ್ಜೇಗೌಡನಪುರ.
2. ಶ್ರೀ ಅಶ್ವಥನಾರಾಯಣ,
3. ಶ್ರೀ ಶಿವಣ್ಣ ಅರಸಿನಕೆರೆ,

ಮೊದಲನೆಯದಾಗಿ ಹಿಂದಿನ ಸಭೆಯಲ್ಲಿ ಚರ್ಚೆ ನಡೆದಿದ್ದ ವಿಷಯಗಳ ಬಗ್ಗೆ ಸಹಾಯಕ ಅಧೀಕ್ಷಕ ಇಂಜಿನಿಯರ್(ವಿ) ರವರು ಅನುಪಾಲನಾ ವರದಿಯನ್ನು ಓದಿ ಗ್ರಾಹಕರ ಕುಂದು ಕೊರತೆಗಳನ್ನು ಈಗಾಗಲೇ ಬಗೆಹರಿಸಿರುವುದಾಗಿ ತಿಳಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.**

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ಬಸವರಾಜು , ಗುಜ್ಜೇಗೌಡನಪುರ 9945558149 | • ಮಂಡನಹಳ್ಳಿ ಗ್ರಾಮದಿಂದ ಧರಣಿಪಾಲ್ ಫಾರಂಗೆ ಹಾದು ಹೋಗಿರುವ 11 ಕೆ.ವಿ ಐ.ಪಿ ವಿದ್ಯುತ್ ಮಾರ್ಗದಲ್ಲಿ Copper Conductor ಇದ್ದು ಇದನ್ನು ಬದಲಾಯಿಸಬೇಕಾಗಿ | • ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ತಕ್ಷಣವೇ ಸ್ಥಳ ಪರಿಶೀಲಿಸಿ Copper Conductor ನ್ನು ತೆರವುಗೊಳಿಸಲು ಕಿರಿಯ |

Scanned by CamScanner

| | | | |
|---|---|---|---|
| | | ತಿಳಿಸಿದರು.<br>• ಹಾರೋಹಳ್ಳಿ ಶಾಖಾ ಕಛೇರಿಯನ್ನು ಭೇಟಿ ಮಾಡಿದಾಗ ಅಲ್ಲಿ ಸರಿಯಾದ ಪಿಠೋಪಕರಣಗಳು ಇಲ್ಲದೇ ಇರುವುದು ಕಂಡುಬಂದಿದ್ದು, ಸ್ಥಳೀಯರು ಬಂದಾಗ ಕುಳಿತುಕೊಳ್ಳುವ ಉದ್ದೇಶದಿಂದ ಕಛೇರಿಗೆ ಪಿಠೋಪಕರಣಗಳನ್ನು ಕೊಡಿಸಿಕೊಡುವಂತೆ ತಿಳಿಸಿದರು.<br>• ಕೆಲವು ತುರ್ತು ಸಂದರ್ಭದಲ್ಲಿ ಗ್ರಾಮಸ್ಥರು ವಿತರಣಾ ಕೇಂದ್ರಕ್ಕೆ ದೂರವಾಣಿ ಕರೆ ಮಾಡಿದಾಗ ವಿತರಣಾ ಕೇಂದ್ರದಲ್ಲಿ ಕರೆಯನ್ನು ಸ್ವೀಕರಿಸುವುದಿಲ್ಲ ಎಂದು ದೂರಿದರು.<br>• ಅರಸಿನಕೆರೆ ಬಳಿ ಗಾಳಿಯಿಂದಾಗಿ 11 ಕೆ.ವಿ ವಿದ್ಯುತ್ ತಂತಿ ತುಂಡಾಗಿ ಬಿದ್ದಿದ್ದರೂ ಸಹ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಫೀಡರ್ ಟ್ರಿಪ್ ಆಗಿಲ್ಲದಿರುವುದಾಗಿ ತಿಳಿಸಿದರು. | ಇಂಜಿನಿಯರ್(ವಿ) ಹಾರೋಹಳ್ಳಿ ಶಾಖೆ ರವರಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸೂಚಿಸಿದರು.<br>• ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಈಗಾಗಲೇ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿದ್ದು, ಶೀಘ್ರದಲ್ಲಿ ಹಾರೋಹಳ್ಳಿ ಶಾಖಾ ಕಛೇರಿಗೆ ಪಿಠೋಪಕರಣಗಳು ಕೊಡಿಸಿಕೊಡುವುದಾಗಿ ತಿಳಿಸಿದರು.<br>• ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟವರಿಗೆ ಪತ್ರ ವ್ಯವಹರಿಸಿ ಇದನ್ನು ಸರಿಪಡಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br>• ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಎಲ್ಲಾ 11 ಕೆವಿ ವಿದ್ಯುತ್ ಕಂಬಗಳಲ್ಲಿ ಅರ್ಥಿಂಗ್ ಬಗ್ಗೆ ಖಾತ್ರಿ ಪಡಿಸಿಕೊಳ್ಳುವಂತೆ ಕಿರಿಯ ಇಂಜಿನಿಯರ್(ವಿ) ಹಾರೋಹಳ್ಳಿ ಶಾಖೆಯವರಿಗೆ ಸೂಚಿಸಿದರು. |
| 2. | ಶ್ರೀ ಅಶ್ವಥ್ ನಾರಾಯಣ<br>9449833792 | • ವಿದ್ಯುತ್ ಮಂಜೂರಾತಿ ಪತ್ರದಲ್ಲಿ ವಿದ್ಯುತ್ ಮಂಜೂರಾತಿ ವಾಯಿದೆ ಕೆ.ಇ.ಆರ್.ಸಿ ನಿಯಮಾವಳಿ ಪ್ರಕಾರ ೯೦ ದಿನಗಳ ಅವಕಾಶವಿದ್ದು, ಇನ್‌ಫೋಸಿಸ್ ತಂತ್ರಾಂಶದಲ್ಲಿ ಬರುತ್ತಿರುವ ವಿದ್ಯುತ್ ಮಂಜೂರಾತಿ ಪತ್ರದಲ್ಲಿ ೩೦ ದಿನಗಳೆಂದು ತೋರಿಸುತ್ತಿದ್ದು, ಇದನ್ನು ಸರಿಪಡಿಸುವಂತೆ ತಿಳಿಸಿದರು.<br>• ಈಗಿನ ನಿಯಮಾವಳಿ ಪ್ರಕಾರ ೭.೫ ಕಿ.ವ್ಯಾ ವರೆಗೆ ಗುತ್ತಿಗೆದಾರರ ಅವಶ್ಯಕತೆ ಇಲ್ಲದೇ ಇರುವುದರಿಂದ ಗ್ರಾಹಕರು ವಿದ್ಯುತ್ ಸಂಪರ್ಕಕ್ಕೆ ಅರ್ಜಿ ನೊಂದಾಯಿಸುವ ಸಂಧರ್ಬದಲ್ಲಿ ಪಿ.ಜಿ.ಆರ್.ಎಸ್ ತಂತ್ರಾಂಶದಲ್ಲಿ ಖಡ್ಡಾಯವಾಗಿ ಗುತ್ತಿಗೆದಾರರನ್ನು ನಮೂದಿಸುವಂತೆ ಇದ್ದು, ಇದನ್ನು ಅಗತ್ಯವಿದ್ದಾಗ ಮಾತ್ರ ನಮೂದಿಸುವಂತೆ ಮಾಡಬೇಕೆಂದು ತಿಳಿಸಿದರು.<br>• ವಾಸು ಬಡಾವಣೆಯ ಹತ್ತಿರ ಇರುವ ಕಂದಾಯ ನಿವೇಶನದಲ್ಲಿ ಗ್ರಾಹಕರು ಅನಧಿಕೃತವಾಗಿ ಬೀದಿ ದೀಪ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡಿದ್ದು, | • ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟವರಿಗೆ ಚರ್ಚಿಸಿ ಇದನ್ನು ಸರಿಪಡಿಸುವಂತೆ ತಿಳಿಸಿದರು.<br>• ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟವರೊಡನೆ ಚರ್ಚಿಸಿ ಇದನ್ನು ಸರಿಪಡಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.<br>• ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ |

Scanned by CamScanner

| | | | |
|---|---|---|---|
| | | ಕೆ.ಇ.ಆರ್.ಸಿ ನಿಯಾಮಾವಳಿ ಪ್ರಕಾರ ಇದಕ್ಕೆ ಅಂದಾಜು ಪಟ್ಟಿ ತಯಾರಿಸಿ ಹಣ ಪಾವತಿಸಿಕೊಳ್ಳುವಂತೆ ಸೂಚಿಸಿದರು. | ತೆಗೆದುಕೊಳ್ಳುವಂತೆ ಸಹಾಯಕ ಇಂಜಿನಿಯರ್(ವಿ), ವಿವೇಕಾನಂದ ಶಾಕೆ ರವರಿಗೆ ಸೂಚಿಸಿದರು. |
| ૩. | ಶ್ರೀ ಶಿವಣ್ಣ, ಅರಸಿನಕೆರೆ 9980348475 | • ಅರಸಿನಕೆರೆ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಕಂಬಗಳ ಅಂತರ ಜಾಸ್ತಿಯಿದ್ದು, ಮಂಧ್ಯಂತರ ಕಂಬಗಳನ್ನು ಅಳವಡಿಸುವಂತೆ ಕೋರಿದರು. | • ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ತಕ್ಷಣವೇ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಕಿರಿಯ ಇಂಜಿನಿಯರ್(ವಿ), ಜಯಪುರ ಶಾಖೆ ರವರಿಗೆ ಸೂಚಿಸಿದರು. |

ಅಂತಿಮವಾಗಿ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಸದಸ್ಯರುಗಳಿಗೆ ವಂದಿಸುತ್ತಾ ಮಧ್ಯಾಹ್ನ 1:00 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ,
ಮೈಸೂರು.

ಪ್ರತಿಯನ್ನು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ನಗರ ಕಾಮಗಾರಿ ವೃತ್ತ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.
2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.

Scanned by CamScanner